**ಎಂ ವಿ ಸಿ 1136/2024 ಪಿಡಬ್ಲ್ಯೂ2**

**ಸಾಕ್ಷಿಯನ್ನು ದಿ: 14.07.2026 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀಮತಿ ಸಿ ವಿ ವಕೀಲರಿಂದಃ**

ನಾನು 10 ವರ್ಷಗಳಿಂದ ವೈದ್ಯ ವೃತ್ತಿ ಮಾಡುತ್ತಿದ್ದೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರಿಕೆಯಲ್ಲಿ ಕೆ ಎಂ ಸಿ ನೋಂದಣಿ ಸಂಖ್ಯೆಯನ್ನು ನಮೂದಿಸಬೇಕು ಎಂಬ ಸಂಗತಿ ನನಗೆ ಗೊತ್ತಿಲ್ಲ. ನನ್ನ ಕೆ ಎಂ ಸಿ ಸಂಖ್ಯೆ 76620 ಆಗಿದೆ. ನಾನು ಗಾಯಾಳುವನ್ನು ಮೊದಲ ಬಾರಿಗೆ ಡಿ ಆರ್ ಎಂ ಆಸ್ಪತ್ರೆಯಲ್ಲಿ ದಿನಾಂಕ 05.05.2024 ರಂದು ನೋಡಿದೆ. ನಾನು ಗಾಯಾಳುವನ್ನು ನೋಡುವುದಕ್ಕಿಂತ ಮೊದಲು ಅವರು ಕೆ ಆರ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದರು. ಗಾಯಾಳುವಿಗೆ ತೀವ್ರವಾದ ಬೆನ್ನುಮೂಳೆ ಮತ್ತು ಬೆನ್ನುಹುರಿಯ ಏಟು ಆಗಿತ್ತು. ಗಾಯಾಳುವಿಗೆ ಎಂ ಆರ್ ಸ್ಕ್ಯಾನ್ ಮಾಡಿ ಈ ಗಾಯವನ್ನು ಖಚಿತಪಡಿಸಿಕೊಂಡೆ. ಸದರಿ ಎಂ ಆರ್ ಐ ನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ. ಎಂ ಆರ್ ಐ ಸ್ಕ್ಯಾನ್ ಆದ ನಂತರ ಗಾಯಾಳುವಿಗೆ ಸ್ಪೈನ್ ಸರ್ಜರಿಯನ್ನು ಮಾಡಿದೆ. ಅಪಘಾತ ಆದ ಮರು ದಿನ ಗಾಯಾಳುವಿಗೆ ಸ್ಪೈನ್ ಸರ್ಜರಿಯನ್ನು ಮಾಡಿದೆ. ಸ್ಪೈನ್ ಸರ್ಜರಿಯನ್ನು ನಾನೊಬ್ಬನೇ ಮಾಡಿದೆ. ಸಾಮಾನ್ಯವಾಗಿ ಯಾವುದೇ ಶಸ್ತ್ರ ಚಿಕಿತ್ಸೆ ಮಾಡಿದರೂ ಸಹ ಅದನ್ನು ನಮೂದು ಮಾಡಲು ಒಂದು ವಹಿಯನ್ನು ನಿರ್ವಹಣೆ ಮಾಡಿರುತ್ತಾರೆ ಎಂದರೆ ಸರಿ. ಈ ಪ್ರಕರಣದ ಗಾಯಾಳುವಿಗೆ ಶಸ್ತ್ರ ಚಿಕಿತ್ಸೆ ನಡೆಸಿರುವ ಸಂಬಂಧ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ.

ಗಾಯಾಳುವು ದಿನಾಂಕ 06.05.2024 ರಿಂದ 22.05.2024 ರವರೆಗೆ ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡರು. ಚಿಕಿತ್ಸೆ ನೀಡಿದಾಗ ರೋಗಿಯು ಗುಣಮುಖರಾದ ನಂತರ ನಾವು ಆಸ್ಪತ್ರೆಯಿಂದ ಬಿಡುಗಡೆ ಮಾಡುತ್ತೇವೆ ಎಂದರೆ ಸರಿ, ಗಾಯಾಳುವು ಗುಣಮುಖರಾಗಿರಲಿಲ್ಲ. ಅರ್ಜಿದಾರನನ್ನು ಆಸ್ಪತ್ರೆಯಿಂದ ಬಿಡುಗಡೆ ಮಾಡಿದ ಸಮಯದಲ್ಲಿ ಮಾತ್ರೆಗಳನ್ನು ಸೇವಿಸುವಂತೆ ಮತ್ತು ಪಿಜಿಯೋಥೆರಪಿ ಮಾಡಿಸಿಕೊಳ್ಳುವಂತೆ ಸಲಹೆ ನೀಡಿದ್ದೆ. ಗಾಯಾಳುವು ಇತ್ತೀಚೆಗೆ ನನ್ನ ಬಳಿ ಬಂದಿದ್ದ ದಿನಾಂಕ ನನಗೆ ಗೊತ್ತಿಲ್ಲ.

ದಿನಾಂಕ 22.05.2024 ರಂದು ಆಸ್ಪತ್ರೆಯಿಂದ ಬಿಡುಗಡೆಗೊಂಡ ನಂತರ ಹಲವಾರು ಬಾರಿ ನನ್ನ ಬಳಿ ಬಂದು ಚಿಕಿತ್ಸೆ ಪಡೆದುಕೊಂಡಿದ್ದಾರೆ. ದಿನಾಂಕ 22.05.2024 ರಂದು ಆಸ್ಪತ್ರೆಯಿಂದ ಬಿಡುಗಡೆಯಾದ ನಂತರ ಅರ್ಜಿದಾರನ ಕಾಲಿಗೆ ಫಂಗಸ್ ಗ್ಯಾಂಗ್ರಿನ್ ಆಗಿದ್ದ ಕಾರಣ ಪುನಃ ದಿನಾಂಕ 27.05.2024 ರಂದು ನಮ್ಮ ಆಸ್ಪತ್ರೆಯ ಪ್ಲಾಸ್ಟಿಕ್ ಸರ್ಜರಿ ವಿಭಾಗದಲ್ಲಿ ಒಳರೋಗಿಯಾಗಿ ದಾಖಲಾಗಿದ್ದರು. ಗಾಯಾಳುವಿನ ಬಲಗಾಲಿನ ಪಾದಕ್ಕೆ ಫಂಗಸ್ ಗ್ಯಾಂಗ್ರಿನ್ ಆಗಿದ್ದ ಕಾರಣ ಅವರು ಆಸ್ಪತ್ರೆಯಲ್ಲಿ ದಾಖಲಾಗಿದ್ದರು ಮತ್ತು ಅವರ ಬಲಗಾಲಿನ ಪಾದವನ್ನು ಶಸ್ತ್ರ ಚಿಕಿತ್ಸೆ ಮೂಲಕ ತೆಗೆಯಲಾಗಿದೆ.

ಗಾಯಾಳುವು ಮೊದಲು ಆಸ್ಪತ್ರೆಯಿಂದ ಬಿಡುಗಡೆಯಾದ ದಿನಾಂಕ ಮತ್ತು ಪುನಃ ಆಸ್ಪತ್ರೆಗೆ ದಾಖಲಾದ ದಿನಾಂಕದ ನಡುವೆ ಕೇವಲ 5 ದಿನಗಳ ಅಂತರವಿದೆ ಎಂದರೆ ಸರಿ. ಗಾಯಾಳುವು ಮೊದಲ ಬಾರಿ ನಮ್ಮ ಆಸ್ಪತ್ರೆಯಲ್ಲಿ ದಾಖಲಾಗಿದ್ದ ಸಮಯದಲ್ಲಿ ಪ್ಲಾಸ್ಟಿಕ್ ಸರ್ಜರಿ ವಿಭಾಗದ ವೈದ್ಯರು ಗಾಯಾಳುವಿನ ಬಲಗಾಲಿಗೂ ಸಹ ಚಿಕಿತ್ಸೆ ನೀಡಿದ್ದರು. ನಾನು ಚಿಕಿತ್ಸೆ ನೀಡುವುದಕ್ಕಿಂತ ಮೊದಲು ಗಾಯಾಳುವು ಯಾರ ಯಾರ ಬಳಿ ಯಾವ ಯಾವ ಚಿಕಿತ್ಸೆ ಪಡೆದುಕೊಂಡಿದ್ದಾರೆ ಎಂದು ತಿಳಿದುಕೊಳ್ಳಬೇಕಾಗುತ್ತದೆ ಎಂದರೆ ಸರಿ. ಗಾಯಾಳುವು ನಮ್ಮ ಆಸ್ಪತ್ರೆಯಲ್ಲಿಯೇ ಬಲಗಾಲಿಗೆ ಚಿಕಿತ್ಸೆ ಪಡೆದುಕೊಂಡರು. ಗಾಯಾಳುವು ನಮ್ಮ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಲು ದಾಖಲಾದಾಗ ನಾನು ಗಾಯಾಳುವಿಗೆ ಸೂಕ್ತ ರೀತಿಯಲ್ಲಿ ಚಿಕಿತ್ಸೆ ನೀಡದೆ ಇದ್ದ ಕಾರಣ ಗಾಯಾಳುವು ಪುನಃ ಆಸ್ಪತ್ರೆಗೆ ದಾಖಲಾಗಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಗಾಯಾಳುವಿನ ಬಲಗಾಲಿನ ಪಾದಕ್ಕೆ ಸಂಬಂಧಿಸಿದಂತೆ ಆಸ್ಪತ್ರೆಯ ಪ್ಲಾಸ್ಟಿಕ್ ಸರ್ಜರಿ ವಿಭಾಗದವರು ಚಿಕಿತ್ಸೆ ನೀಡಿದ್ದರು ಮತ್ತು ತನ್ನ ವಿಭಾಗಕ್ಕೆ ಸಂಬಂಧಿಸಿದಂತೆ ಸೂಕ್ತ ಚಿಕಿತ್ಸೆಯನ್ನು ತಾನು ನೀಡಿದ್ದಾಗಿ ಹೇಳುತ್ತಾರೆ.

ದಿನಾಂಕ 27.05.2024 ರಂದು ಗಾಯಾಳುವು ಪುನಃ ನಮ್ಮ ಆಸ್ಪತ್ರೆಗೆ ದಾಖಲಾದಾಗ ನಾನು ಅವರಿಗೆ ಚಿಕಿತ್ಸೆ ನೀಡಿಲ್ಲ. ಗಾಯಾಳುವಿನ ಬಲಗಾಲಿನ ಪಾದಕ್ಕೆ ಫಂಗಸ್ ಗ್ಯಾಂಗ್ರಿನ್ ಆಗಿತ್ತು ಎಂಬ ಸಂಗತಿಯನ್ನು ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರಿಕೆಯಲ್ಲಿ ಡಿಸ್ ಚಾರ್ಜ ಸಮ್ಮರಿ ಆಧಾರದ ಮೇಲೆ ಹೇಳಿದ್ದೇನೆ. ನಾನು ನರ ಶಸ್ತ್ರ

ಚಿಕಿತ್ಸಾ ತಜ್ಞ ಎಂದರೆ ಸರಿ.

ಅರ್ಜಿದಾರರು ಶೇಕಡ 95 ರಷ್ಟು ಅಂಗ ನ್ಯೂನತೆಯಿಂದ ಬಳಲುತ್ತಿದ್ದಾರೆ ಎಂದು ಸರ್ಕಾರಿ ಆಸ್ಪತ್ರೆಯ ವೈದ್ಯರು ನೀಡಿರುವ ಪ್ರಮಾಣಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಸದರಿ ಅಂಗ ನ್ಯೂನತೆಯು ಒಟ್ಟಾರೆ ದೇಹಕ್ಕೆ ಅನ್ವಯಿಸುತ್ತದೆ. ಗಾಯಾಳುವು ಮುಂದುವರಿದ ಚಿಕಿತ್ಸೆಗಾಗಿ ನನ್ನ ಬಳಿಗೆ ಬರುತ್ತಿದ್ದ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರಿಕೆಯಲ್ಲಿ ಉಲ್ಲೇಖಿಸಿರುವ ಡಿಸೆಬಲಿಟಿಗೆ ಸಂಬಂಧಿಸಿದ ಅಧಿಸೂಚನೆಯು ಸರ್ಕಾರಿ ದಾಖಲೆಯಾದ್ದರಿಂದ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

ಅಪಘಾತ ಸಮಯದಲ್ಲಿ ಗಾಯಾಳುವಿಗೆ 28 ವರ್ಷ ವಯಸ್ಸಾಗಿತ್ತು. ಗಾಯಾಳುವು ಜೀವನೋಪಾಯಕ್ಕಾಗಿ ಏನು ಕೆಲಸ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ನಾನು ಗಾಯಾಳುವಿಗೆ ಏನೇನು ಚಿಕಿತ್ಸೆ ನೀಡಿದೆ ಎಂಬ ಬಗ್ಗೆ ಕೇಸ್ ಶೀಟ್ ನಲ್ಲಿ ದಾಖಲು ಮಾಡಿದ್ದೇನೆ. ಸಾಮಾನ್ಯವಾಗಿ ಮಧುಮೇಹ ಖಾಯಿಲೆ ಇರುವವರೆಗೆ ಗ್ಯಾಂಗ್ರಿನ್ ಆದರೆ ಗ್ಯಾಂಗ್ರಿನ್ ಆದ ಭಾಗವನ್ನು ತೆಗೆದು ಹಾಕುತ್ತಾರೆ ಎಂದರೆ ಸರಿ. ಗಾಯಾಳುವು ನನ್ನ ಬಳಿ ಚಿಕಿತ್ಸೆಗೆ ಬಂದಾಗ ಅವರಿಗೆ ಮಧುಮೇಹ ಖಾಯಿಲೆ ಇರಲಿಲ್ಲ. ಗಾಯಾಳುವಿಗೆ ಮಧುಮೇಹ ಖಾಯಿಲೆ ಇದ್ದ ಕಾರಣದಿಂದಲೇ ಗ್ಯಾಂಗ್ರಿನ್ ಆಗಿತ್ತು ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಅನುಕೂಲ ಆಗಲಿ ಎಂಬ ಕಾರಣದಿಂದ ಸುಳ್ಳು ದಾಖಲೆಯನ್ನು ಸೃಷ್ಟಿ ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**
**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಪಾಂಡವಪುರ.**